

ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂಬ ಭರವಸೆ ಅವರು ಕೊಡದೇ ಹೋದರೆ ತಾನು ಗಂಡನ ಮನೆಗೆ ಮರಳುವುದಿಲ್ಲ' ಎಂದಳು.

ಸುನೀತಾ, 65 ವರ್ಷದ ಮಹಿಳೆ. ಬಹಳ ಆತ್ಮಸ್ಥೈರ್ಯದ ಹೆಣ್ಣು. ಆಕೆಯ ಗಂಡ, ಆತನ ಮನೆಯವರು ಬಹಳ ಶ್ರೀಮಂತರು, ಸಿಟಿಯ ಮಧ್ಯೆಯೇ ದೊಡ್ಡ ಮನೆಯಲ್ಲಿ ಅವರ ವಾಸವಿತ್ತು. ಮನೆಯಲ್ಲಿ ಯಾವತ್ತೂ ನಾಲ್ಕೈದು ಆಳುಕಾಳು ಇರುವಂತಹ ಮನೆ. ಇಬ್ಬರು ಹೆಣ್ಣುಮಕ್ಕಳು ಮದುವೆಯಾಗಿ ಹೊರದೇಶದಲ್ಲಿದ್ದರು. ಸುನೀತಾರ ಕಿವಿ, ಕೈಬೆರಳುಗಳಲ್ಲಿ ವಜ್ರದ ಆಭರಣಗಳು ಹೊಳೆಯುತ್ತಿದ್ದವು. 'ಇವನ್ನು ಬಿಟ್ಟರೆ ನನ್ನ ಬಳಿ ಬೇರೇನೂ ಇಲ್ಲ' ಎಂದು ಆಕೆ ಹೇಳಿದರು. ಅದು ನಿಜವಾಗಿತ್ತು. ಆಕೆ ಬಹಳ ಚುರುಕಿನ, ಬುದ್ಧಿವಂತ ವ್ಯಕ್ತಿಯಾಗಿದ್ದರೂ, ಆಕೆಯದ್ದೇ ಆದ ಒಂಚೂರು ಹಣವೂ ಅವರ ಬಳಿ ಇರಲಿಲ್ಲ.

ಬಹಳ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿದ್ದು, ಮುಂದೆ ಓದಲು ಅಥವಾ ಉದ್ಯೋಗದಲ್ಲಿರಲು ಅವರ ಗಂಡ ಬಿಟ್ಟಿರಲೂ ಇಲ್ಲ. ಏನೋ ಚಿಕ್ಕ ಪಗಾರದಂತೆ, ಅದೂ ಯಾವಾಗಲೋ ಒಮ್ಮೆ ಗಂಡ ಅವರಿಗೆ ಕೊಡುತ್ತಿದ್ದ ದುಡ್ಡು ಅವರ ನಿತ್ಯದ ಖರ್ಚಿಗೇ ಸಾಲುತ್ತಿರಲಿಲ್ಲ. ಅಷ್ಟು ಶ್ರೀಮಂತರಾಗಿದ್ದರೂ, ಅತೀ ಬೆಲೆಬಾಳುವ ಪೀಠೋಪಕರಣಗಳು, ಕಲಾಕೃತಿಗಳು ಮನೆಯಲ್ಲಿದ್ದರೂ, ಏನೋ ಒಂದು ತನಗೆ ಬೇಕಾದ್ದನ್ನು ಮಾಡಲು ಆಕೆಗೆ ಸ್ವಾತಂತ್ರ್ಯವಿರಲಿಲ್ಲ. ಯಾವುದೇ ಪ್ರವಾಸಕ್ಕೆ ಹೋಗಬೇಕೆನಿಸಿದರೆ, ಯಾವುದೋ ಡಾನ್ಸ್ ಕೋರ್ಸ್ ಅಥವಾ ಫೋಟೊಗ್ರಫಿ ಕೋರ್ಸ್ ಮಾಡಬೇಕೆನಿಸಿದರೂ ಗಂಡನನ್ನು ಕೇಳಿ, ಒಪ್ಪಿಸಿ, ಅವನಾಡುವ ತಾತ್ಸಾರದ ಮಾತುಗಳನ್ನು ಕೇಳಿಸಿಕೊಳ್ಳಬೇಕಿತ್ತು. ಕೆಲವೊಮ್ಮೆ ಹಾಗೆ ಮಾಡುವ ಮನಸ್ಸಿಲ್ಲದೆ, ತನಗೆ ಬೇಕಾಗಿದ್ದಕ್ಕೆ ತನ್ನದೇ ಯಾವುದೋ ಒಡವೆಯನ್ನು ಸುನಿತಾ ಮಾರಿದ್ದೂ ಇತ್ತು. ಈಗ ಕೆಲವು ವರ್ಷಗಳಿಂದ ಸುನೀತಾರ ಗಂಡ ಅವರ ಮಗಳ ವಯಸ್ಸಿನ ಒಬ್ಬ ಹುಡುಗಿಯ ಜೊತೆ ಸಂಬಂಧವಿರಿಸಿಕೊಂಡಿದ್ದ.

ಒಂದು ದಿನ ಸುನೀತಾ ಹೊರಗೆಲ್ಲೊ ಹೋಗಿ ಮನೆಗೆ ಬಂದಾಗ, ತನ್ನ ಕೆಲವು ಬಟ್ಟೆಬರೆ, ಒಂದಷ್ಟು ಸಾಮಾನು ತನ್ನ ಚಿಕ್ಕ ಕಾರ್‌ನಲ್ಲಿ ಇಟ್ಟಿರುವುದನ್ನು ಕಂಡರು. ಮನೆಗೆ ಬೀಗ ಹಾಕಲಾಗಿತ್ತು, ಬೀಗವನ್ನೇ ಬದಲಾಯಿಸಲಾಗಿತ್ತು. ಆಕೆ ಗಂಡನಿಗೆ ಫೋನ್ ಮಾಡಿ ಕೇಳಿದಾಗ, 'ನೀನು ಇನ್ನು ಮುಂದೆ ಆ ಇನ್ನೊಂದು ಫ್ಲಾಟ್‌ನಲ್ಲಿ ಇರು, ಇಲ್ಲಿ ಬರುವುದು ಬೇಡ' ಎಂದುಬಿಟ್ಟ. ಆ ಇನ್ನೊಂದು ಮನೆ, ಸಿಟಿಯ ಹೊರಗೆ ಇದ್ದ ಒಂದು ಬೆಡ್‌ರೂಮಿನ ಮನೆ. ಎರಡು ಮಹಡಿಯ, ಐದು ವಿಶಾಲವಾದ ಕೋಣೆ, ಕೆಲಸದವರ ಕೋಣೆ ಪ್ರತ್ಯೇಕವಾಗಿದ್ದ ಈ ಮನೆಗೆ, ಮನೆಯವರಿಗೆ ತಾನು ಮಾಡಿದ ಕೆಲಸ, ವ್ಯಯಿಸಿದ ಜೀವನದ 45 ಅಮೂಲ್ಯ ವರ್ಷಗಳ ಬಗ್ಗೆ ನನಗೆ ದುಃಖದಿಂದ ಹೇಳಿಕೊಂಡರು. ಆಗ ಅವರ ಮುಖದಲ್ಲಿ ಒಂದು ರೀತಿಯ ವಿಷಾದವಿತ್ತಾದರೂ, ಒಂದು ಬಗೆಯ ನಿರಾಳತೆಯನ್ನೂ ನಾನು ಗಮನಿಸಿದೆ. 'ಈ ಗಂಡ, ಮನೆ, ಮಕ್ಕಳು – ಎಂಥಾ ವೇಸ್ಟ್! ಮೊದಲಿಂದಲೇ ಈ ಸಾಲ್ಸಾ ಡಾನ್ಸ್, ವೈಲ್ಡ್‌ಲೈಫ್ ಫೋಟೊಗ್ರಫಿ ಮಾಡಿಕೊಂಡು ಇದ್ದುಬಿಡಬೇಕಿತ್ತು' ಅಂದರು ಜೋರಾಗಿ ನಗುತ್ತಾ. ನಾನೂ ನಕ್ಕಾಗ, 'ನೋ ಡಿಯರ್, ಐ ಆ್ಯಮ್ ಸೀರಿಯಸ್, ಡು ನಾಟ್ ವೇಸ್ಟ್ ಯುವರ್ ಲೈಫ್ ಆನ್ ದೀಸ್' ಅಂದರು!

***

ಜಗತ್ತಿನ ಕ್ರೌರ್ಯದಿಂದ ರಕ್ಷಣೆ ಪಡೆಯಲು ಮನೆಯಲ್ಲಿರುತ್ತೇವೆ. 'ಜಗತ್ತು ಸರಿ ಇಲ್ಲ, ಬೇಗ ಮನೆ ಸೇರಬೇಕು' ಎನ್ನುವ ಮಾತನ್ನು ಕೇಳುತ್ತೇವೆ. ಅಂದರೆ ನಮ್ಮೆಲ್ಲರ ದೃಷ್ಟಿಯಲ್ಲಿ 'ಮನೆ' ಎಂಬುದು ಬರೀ ಭೌತಿಕ ರಚನೆಯಷ್ಟೇ ಅಲ್ಲವೇ ಅಲ್ಲ. ಬಿಸಿಲು, ಗಾಳಿ, ಮಳೆ ಚಳಿಗಳಿಂದಷ್ಟೇ ರಕ್ಷಿಸುವ ಸೂರಷ್ಟೇ ಅಲ್ಲ. ಅದರಾಚೆಗೆ ಒಂದು ಮಾನಸಿಕ ನೆಮ್ಮದಿಯ ತಾಣವೂ ಹೌದು. 'ನಮ್ಮವರು' ಎಲ್ಲರೂ ಒಂದೆಡೆ ಸೇರಿ ಬದುಕುವ, ಆ ಮೂಲಕ ಪರಸ್ಪರ 'ಕಂಫರ್ಟ್' ಭಾವ ತುಂಬಿಕೊಳ್ಳುವ ವ್ಯವಸ್ಥೆ ಕುಟುಂಬ. ಇದು ಆದರ್ಶದ ಮಾತಾಯ್ತು ಬಿಡಿ. ಆದರೆ ವಾಸ್ತವದಲ್ಲಿ 'ಮನೆ' ಎಂಬ ತಾಣವಾಗಲಿ, 'ಕುಟುಂಬ' ಎಂಬ ವ್ಯವಸ್ಥೆಯಾಗಲಿ ಎಲ್ಲ ಸಲವೂ ಹೀಗೆಯೇ ಇರುವುದಿಲ್ಲ. ಬಾವಿಯಿಂದ ಜೀವಜಲವನ್ನು ಎತ್ತಿಕೊಡುವ ಹಗ್ಗವೇ ಕತ್ತಿಗೆ ಬಿಗಿದರೆ ಜೀವವನ್ನೂ ತೆಗೆಯುವಷ್ಟು ಕ್ರೂರಿಯೂ ಆಗಿಬಿಡಬಹುದಲ್ಲವೇ? ನೆಮ್ಮದಿಯ ತಾಣವೇ ಹಿಂಸೆಯ ಕೂಪವೂ ಆಗಿರುವ ಹತ್ತು ನೂರು ಉದಾಹರಣೆಗಳನ್ನು ನಮ್ಮ ಅಕ್ಕಪಕ್ಕದ ಮನೆಯ ಗೋಡೆಗಳೇ (ನಮ್ಮ ಮನೆಯ ಗೋಡೆಗಳೂ!) ಉಸುರುತ್ತವೆ.

## ಹಿಂಸೆಗೆ ಅನಂತ ಮುಖಗಳು!

ಮನೆಯೊಳಗಿನ ಹಿಂಸೆ, ಅತೀ ಹತ್ತಿರದವರಿಂದಲೇ ನಡೆಯುವ ಕ್ರೌರ್ಯ ನೀಡುವ ಆಘಾತ ಬಹಳ ಕ್ರೂರವಾದದ್ದು. ಇದು ದೈಹಿಕ ಹಿಂಸೆ ಮಾತ್ರವಲ್ಲ, ಅನೇಕ ರೂಪಗಳಲ್ಲಿ ಕಂಡುಬರುತ್ತದೆ. ಮಾನಸಿಕ ಹಿಂಸೆ, ಚುಚ್ಚುಮಾತು, ಮಕ್ಕಳಾಗದಿದ್ದರೆ ಹಿಂಸಿಸುವುದು, ಗಂಡುಮಕ್ಕಳಾಗದಿದ್ದರೆ ಹೀಯಾಳಿಸುವುದು,